# ಶ್ರೀ ಶಾರದಾಮಠ ಹಾಗೂ ಸ್ತ್ರೀಶಕ್ತಿ ಜಾಗೃತಿ

**ಸ್ತ್ರೀಯರು ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಸಾಮರ್ಥ್ಯವನ್ನು ಮೆರೆಯುತ್ತಿರುವ ಈ ಯುಗದಲ್ಲಿ ಶ್ರೀಶಾರದಾಮಠವು ಸ್ತ್ರೀಯರ ಶಕ್ತಿ ಸಾಮರ್ಥ್ಯದ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವರಿಗಿರುವ ಸ್ವತಂತ್ರ ಹಕ್ಕು ಬಾಧ್ಯತೆಗಳ ದ್ಯೋತಕವಾಗಿದೆ. ಆ ಮಠದ ಪ್ರಧಾನ ಕಾರ್ಯದರ್ಶಿಗಳಾಗಿರುವ ಪ್ರವ್ರಾಜಿಕಾ ಅಮಲಪ್ರಾಣಾಜಿಯವರು ಸ್ವಾಮಿ ವಿವೇಕಾನಂದರಿಗೆ ಸ್ತ್ರೀಯರ ಮೇಲಿದ್ದ ಭರವಸೆಯ ಹಿನ್ನೆಲೆಯಲ್ಲಿ ಶ್ರೀಶಾರದಾಮಠದ ಒಂದು ಕಿರುಪರಿಚಯವನ್ನು ಮಾಡಿಕೊಟ್ಟಿರುವರು.**

## ನಾರೀಶ್ರೇಷ್ಠರ ನಾಡಿನಲ್ಲಿ ಅಬಲೆಯರ ವೇದನೆ

*'ಮೊದಲು ತಾಯಿ ಮತ್ತು ಆಕೆಯ ಪುತ್ರಿಯರು; ಆನಂತರವೇ ತಂದೆ ಮತ್ತು ಆತನ ಪುತ್ರರು'*—ಈ ನುಡಿ ಸ್ವಾಮಿ ವಿವೇಕಾನಂದರದು. ಈ ಮಾತಿನ ತಾತ್ಪರ್ಯವನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಆ ಕಾಲದ ಭರತವರ್ಷದ ಹೆಣ್ಣುಮಕ್ಕಳ ಶೋಚನೀಯವಾದ ಪರಿಸ್ಥಿತಿಯ ಅರಿವು ಆವಶ್ಯಕ. ಬಹು ಪುರಾತನ ಕಾಲದಿಂದ ಭರತವರ್ಷವು ಮಹಿಮಾನ್ವಿತರಾದ ಮಹಿಳೆಯರ ದೇಶ ಎಂದು ಖ್ಯಾತಿ ಪಡೆದಿದೆ—'ಎಲ್ಲಕ್ಕಿಂತಲೂ ಮಿಗಿಲಾಗಿ ಭಾರತವು ಶ್ರೇಷ್ಠ ಮಹಿಳೆಯರ ನಾಡು'— ಎಂದು ಉದ್ಗರಿಸಿದರು, ಸ್ವಾಮಿ ವಿವೇಕಾನಂದರು. ಸೀತಾ ಸಾವಿತ್ರಿಯರಂತಹ ಆದರ್ಶನಾರಿಯರ, ಬ್ರಹ್ಮವಾದಿನಿಯರಾದ ಗಾರ್ಗಿ, ಮೈತ್ರೇಯಿಯರ ದೇಶ. ಮೀರಾಬಾಯಿ, ಮುಕ್ತಾಯಕ್ಕ, ಅಕ್ಕಮಹಾದೇವಿಯರಂತಹ ಸಂತ ಸಾಧ್ವಿಯರ ದೇಶವೂ ಹೌದು. ಅದರೊಡನೆಯೇ ರಾಣಿ ಅಹಲ್ಯಾಬಾಯಿ, ಝಾನ್ಸಿ ಲಕ್ಷ್ಮಿಬಾಯಿಯಂತಹ ವೀರ ಮಹಿಳೆಯರು ತಮ್ಮ ಶೌರ್ಯವನ್ನು ಮೆರೆದ ನಾಡಿದು. ಆದರೆ ಸ್ವಾಮಿ ವಿವೇಕಾನಂದರು ಭಾರತದಲ್ಲಿ ಪರಿವ್ರಾಜಕರಾಗಿ ಹಿಮಾಲಯದಿಂದ ಕನ್ಯಾಕುಮಾರಿಯ ಪರ್ಯಂತ ನಡೆದು ನೋಡಿದಾಗ ಭಾರತದ ಸ್ತ್ರೀಯರ ಅವಸ್ಥೆ ಹೇಗಿತ್ತು? ವಿದ್ಯೆಯ ಹೆಸರಿಲ್ಲದೆ, ಎಳ್ಳಷ್ಟೂ ಸ್ವಾತಂತ್ರ್ಯವಿಲ್ಲದೆ, ಎಲ್ಲ ರೀತಿಯ ಶೋಷಣೆಗಳಿಗೆ ಬಲಿಯಾದ ಮಹಿಳೆಯರ ದುರವಸ್ಥೆಯನ್ನು ನೋಡಿ ಕಣ್ಣೀರಿನ ಕೋಡಿಯನ್ನೇ ಹರಿಸಿದರು ಸ್ವಾಮಿ ವಿವೇಕಾನಂದರು.

## ಸ್ತ್ರೀ ಶಿಕ್ಷಣ ಏಕೈಕ ಪರಿಹಾರ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಒಂದು ಸಮಾಜಕ್ಕೆ ಸ್ತ್ರೀಪುರುಷರೆಂದರೆ—ಒಂದು ಪಕ್ಷಿಯ ಎರಡು ರೆಕ್ಕೆಗಳಂತೆ, ಒಂದು ಗಾಡಿಯ ಎರಡು ಚಕ್ರಗಳಂತೆ. ಎರಡೂ ರೆಕ್ಕೆಗಳು ಸಮಾನವಾದ ಶಕ್ತಿಯಿಂದ ಸರಿಯಾಗಿ ಕೂಡಿದ್ದರೆ ಮಾತ್ರವೇ ಆ ಪಕ್ಷಿ ಹೇಗೆ ಆಕಾಶದಲ್ಲಿ ಹಾರಬಲ್ಲದೋ ಹಾಗೆಯೇ ಒಂದು ದೇಶದ ಉನ್ನತಿಗೆ ಸಮಾನವಾಗಿ ಉನ್ನತರಾದ ಸ್ತ್ರೀಪುರುಷರಿಬ್ಬರೂ ಆವಶ್ಯಕ.

ಸ್ವಾಮಿ ವಿವೇಕಾನಂದರ ಆಗಮನದ ಕೆಲವು ದಶಕಗಳ ಹಿಂದಿನಿಂದ ಭಾರತದಲ್ಲಿ ನವಜಾಗರಣೆಯ ವಾತಾವರಣ ಆರಂಭವಾಗಿತ್ತು. ರಾಜಾ ರಾಮಮೋಹನ, ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರಸೇನ್ ಇತ್ಯಾದಿ ಸುಧಾರಕರು ಸಮಾಜದಲ್ಲಿ ಸ್ತ್ರೀಯರ ಉದ್ಧಾರಕ್ಕಾಗಿ ವಿಧವಾವಿವಾಹವೇ ಮೊದಲಾದ ವಿಷಯಗಳನ್ನು ಕುರಿತು ಸಮಾಜಸುಧಾರಣೆಯ ಕೆಲಸವನ್ನು ಆರಂಭಿಸಿದ್ದರು. ಆದರೆ ಈ ಸಕಲ ಸುಧಾರಣೆಗಳಿಗೂ ಸ್ವಾಮಿ ವಿವೇಕಾನಂದರ ಚಿಂತನಾಧಾರೆಗೂ ಇರುವ ದೊಡ್ಡ ವ್ಯತ್ಯಾಸವಿದೆ. ಸ್ವಾಮಿ ವಿವೇಕಾನಂದರು ಸ್ತ್ರೀಯರ ವಿಷಯವಾಗಿ **'ನಮ್ಮ ಕರ್ತವ್ಯ ಅವರಿಗೆ ಸರಿಯಾದ ವಿದ್ಯಾಭ್ಯಾಸ ಕೊಡಿಸುವುದು ಮಾತ್ರ.** ನಂತರ ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯ, ಸಮಾನತೆ ನೀಡಬೇಕು. ಆಗ ತಮಗೆ ಯಾವ ಸುಧಾರಣೆ ಆದರೆ ಒಳ್ಳೆಯದು—ಈ ವಿಷಯದಲ್ಲಿ ಸ್ತ್ರೀಯರೇ ಚಿಂತೆ ಮಾಡಲಿ. ಕಾರಣ—ಸ್ವಾತಂತ್ರ್ಯವೇ ಬೆಳವಣಿಗೆಯ ಪ್ರಪ್ರಥಮ ಆವಶ್ಯಕತೆ' ಎಂದಿದ್ದರು. ಸ್ತ್ರೀಯರು ವಿಧವಾವಿವಾಹ ಅಥವಾ ಯಾವ ವಯಸ್ಸಿಗೆ ವಿವಾಹವಾದರೆ ಒಳ್ಳೆಯದೆಂಬುದನ್ನು ಅವರೇ ನಿಷ್ಕರ್ಷೆಮಾಡಲಿ. ಸ್ತ್ರೀಯರಿಗೆ ಸಂಬಂಧಿಸಿದಂತೆ ಅವರಿಗೆ ಯಾವುದು ಹಿತ ಎಂಬ ವಿಷಯದಲ್ಲಿ ಪುರುಷರು ಏಕೆ ತಲೆಹಾಕಬೇಕು ಎಂಬುದು ಸ್ವಾಮೀಜಿಯವರ ನಿಲುವಾಗಿತ್ತು. 'ನೀವು ಸುಮ್ಮನಿರಿ. ಅವರು ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ' ಎಂದು ಪುರುಷರನ್ನುದ್ದೇಶಿಸಿ ದೃಢವಾಗಿ ಹೇಳಿದರು.

## ವಿವೇಕಾನಂದರ ಸಂಕಲ್ಪ

ಮನುಷ್ಯ ಜೀವನದ ಗುರಿಯೇ ಮುಕ್ತಿಸಾಧನೆ. ಈ ಮುಕ್ತಿಗಾಗಿ ಸರ್ವಪ್ರಥಮವಾದ ತರಬೇತು ಬೇಕು. ಆತ್ಮಜ್ಞಾನ ಅಂದರೆ, ಮನುಷ್ಯನು ಕೇವಲ ಶರೀರವಲ್ಲ, ಸೀಮಿತವಾದ ಮನಸ್ಸು ಅಥವಾ ಬುದ್ಧಿಯೂ ಅಲ್ಲ—ಅವನು ಶುದ್ಧ-ಬುದ್ಧ-ನಿತ್ಯಸ್ವರೂಪನಾದ ಆತ್ಮ—ಈ ಆತ್ಮಜ್ಞಾನದಲ್ಲಿ ಪ್ರತಿಷ್ಠಿತನಾದರೆ ಮನುಷ್ಯನು

ಶೀರ್ಷಿಕೆಯಲ್ಲಿರುವುದು ಶ್ರೀ ಶಾರದಾಮಠದ ಲಾಂಛನ

ಮುಕ್ತಿಯ ಪಥದಲ್ಲಿ ಅಗ್ರೇಸರನಾಗುವನು, ಎಂದು ಸ್ವಾಮಿ ವಿವೇಕಾನಂದರು ಹೇಳಿದರು: 'ಆಧ್ಯಾತ್ಮಿಕ ಪ್ರಜ್ಞೆಯನ್ನು ತೀವ್ರಗೊಳಿಸುವುದರ ಮೂಲಕವೇ ನಿಜವಾದ ವಿಮೋಚನೆ ಸಾಧ್ಯ.' ಈ ಮುಕ್ತಿ ಸಾಧನೆಯ ಹಕ್ಕು ಎಲ್ಲರಿಗೂ ಸಮನಾಗಿಯೇ ಇದೆ. ಸ್ತ್ರೀ ಪುರುಷರ ಭೇದ ಈ ವಿಷಯದಲ್ಲಿ ಇಲ್ಲವೇ ಇಲ್ಲ. ಆತ್ಮಕ್ಕೆ ಲಿಂಗವಿಲ್ಲ ಎಂದು ದೃಢವಾಗಿ ಘೋಷಿಸಿದರು ಸ್ವಾಮೀಜಿಯವರು. ಆದ್ದರಿಂದಲೇ ಅವರು ಬೇಲೂರು ಮಠದ ಸ್ಥಾಪನೆಯ ವಿಷಯವನ್ನು ಕುರಿತು ಚಿಂತೆ ಮಾಡಿದಾಗಲೇ, ಅದಕ್ಕಾಗಿ ನಿಯಮಗಳನ್ನು ರೂಢಿಸಲು ಉದ್ಯುಕ್ತರಾದ ದಿನವೇ ಸ್ತ್ರೀ ಮಠಕ್ಕಾಗಿಯೂ ನಿಯಮಾವಳಿಗಳನ್ನು ಹೇಳಿದ್ದರು. ಅವರ ಸ್ವಪ್ನವಾದರೋ **'ಗಂಗೆಯ ಇನ್ನೊಂದು ದಂಡೆಯಲ್ಲಿ ಶ್ರೀಮಾತೆಯವರನ್ನೇ ಸ್ಫೂರ್ತಿಯ ಕೇಂದ್ರವಾಗಿಟ್ಟುಕೊಂಡು ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕು'**ಎಂಬುದಾಗಿತ್ತು. ಅವರು ಹೇಳಿದ್ದರು, 'ಇಲ್ಲಿ, ಬೇಲೂರು ಮಠದಲ್ಲಿ ಬ್ರಹ್ಮಚಾರಿ ಮತ್ತು ಸಾಧುಗಳಿಗೆ ತರಬೇತಿಯನ್ನು ನೀಡುವಂತೆಯೇ ಆ ಮಠದಲ್ಲಿಯೂ ಬ್ರಹ್ಮಚಾರಿಣಿ ಮತ್ತು ಸಾಧ್ವಿಗಳಿಗೆ ತರಬೇತಿ ನೀಡಲಾಗುವುದು' ಎಂದು.

ಆದರೆ ಅವರ ಜೀವಿತಕಾಲದಲ್ಲಿ ಅವರ ಈ ಕನಸು ನೆರವೇರಲಿಲ್ಲ. ಸ್ತ್ರೀ ಶಿಕ್ಷಣದ ಅಭಾವ ಮತ್ತು ಸ್ತ್ರೀಯರ ಅಜ್ಞಾನ ಹಾಗೂ ಸಮಾಜದ ಕಟ್ಟು ಪಾಡುಗಳ ಅಡಚಣೆಗಳಿಂದಾಗಿ ಅವರ ಸಂಕಲ್ಪ ಸಫಲವಾಗಲು ಸಾಧ್ಯವಾಗಲಿಲ್ಲ. ಆದರೆ ಅವರ ನುಡಿ 'ನಾನು ದೇಹವನ್ನು ಬಿಟ್ಟುಹೋಗಬಹುದು, ಆದರೆ ಜನರನ್ನು ಅವರ ದೈವಿಕತೆಯ ಗುರಿಯೆಡೆಗೆ ಸಾಗಲು ಸ್ಫೂರ್ತಿಯನ್ನೀಯುತ್ತಲೇ ಇರುತ್ತೇನೆ' ಎಂಬುದು ಸತ್ಯವಾಯಿತು. ಅವರ ದೇಹಾಂತವಾದ ೫೦ ವರ್ಷಗಳ ನಂತರ ಅವರ ಕನಸು ನನಸಾಯಿತು.

## ಸ್ತ್ರೀಶಕ್ತಿ ಜಾಗೃತಿಯ ಕೇಂದ್ರವಾಗಿ ಶಾರದಾಮಠ

ಕೇವಲ ೫೦ ವರುಷಗಳಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಯಿಂದ ಸ್ಫೂರ್ತಿಪಡೆದು ಶಿಕ್ಷಣ ಪಡೆದ ಹೆಣ್ಣು ಮಕ್ಕಳು ರಾಮಕೃಷ್ಣ ಮಿಷನ್ನಿನ ವಿದ್ಯಾಲಯ ಮತ್ತು ಚಿಕಿತ್ಸಾಲಯಗಳಲ್ಲಿ ಕೆಲಸ ಮಾಡಲು ಮುಂದೆ ಬಂದರು. ಸ್ವಾಮಿ ವಿವೇಕಾನಂದರ ಆದರ್ಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಡುವ ವ್ರತ ಈ ಮಹಿಳೆಯರದಾಗಿತ್ತು. ಸ್ವಾಮಿ ವಿರಜಾನಂದಜೀಯವರ ಬಳಿ ಮಂತ್ರ ದೀಕ್ಷೆ ಪಡೆದ ಕೆಲವು ಮಹಿಳೆಯರು ಸ್ವಾಮಿ ವಿವೇಕಾನಂದರ ಆದರ್ಶದಲ್ಲಿ ಉತ್ಸಾಹಿತರಾಗಿ **ಶಾರದಾ ಆಶ್ರಮ** ಎಂಬ ಹೆಸರಿನಲ್ಲಿ ತಮ್ಮದೇ ಆದ ಒಂದು ಮಹಿಳೆಯರ ಆಶ್ರಮವನ್ನು ಸ್ಥಾಪಿಸಿಕೊಂಡು ಆಶ್ರಮವಾಸಿನಿಯರಾಗಿ ಆಧ್ಯಾತ್ಮಿಕ ಜೀವನವನ್ನು ನಡೆಸಲು ಆರಂಭ ಮಾಡಿದರು. ಅವರುಗಳೆಲ್ಲ ರಾಮಕೃಷ್ಣ ಮಠದ ಅಧ್ಯಕ್ಷರ ಬಳಿ ಬಂದು 'ಸ್ವಾಮಿ ವಿವೇಕಾನಂದರು ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸುವ ವಿಷಯವನ್ನು ಮತ್ತೆ ಮತ್ತೆ ಪ್ರಸ್ತಾಪಿಸಿದ್ದಾರೆ. ಆದರೂ ಅದನ್ನೇಕೆ ಕಾರ್ಯಗತಗೊಳಿಸಿಲ್ಲ?' ಎಂದು ಮಠ ಸ್ಥಾಪನೆಯ ವಿಷಯವಾಗಿ ಒತ್ತಾಯ ಮಾಡಲು ಶುರು ಮಾಡಿದರು. ಅದರ ವಿಷಯವಾಗಿ ಲೇಖನಗಳನ್ನು ಬರೆಯುವುದು ಆರಂಭವಾಯಿತು.

ಈ ಎಲ್ಲಾ ಕಾರಣಗಳಿಂದಾಗಿ ಶ್ರೀರಾಮಕೃಷ್ಣ ಮಠದ ಆಡಳಿತ ಮಂಡಲಿಯವರು (*Administrative Body*) ಈ ವಿಷಯದಲ್ಲಿ ಗಂಭೀರವಾಗಿ ಚಿಂತಿಸಲು ಆರಂಭ ಮಾಡಿದರು. ಬಹು ದಿನಗಳಿಂದ ರಾಮಕೃಷ್ಣ ಮಿಷನ್ನಿನ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ೮ ಜನ ಸ್ತ್ರೀಯರಿಗೆ ಬ್ರಹ್ಮಚರ್ಯ ದೀಕ್ಷೆಯನ್ನು ಕೊಡಲು ತೀರ್ಮಾನವಾಯಿತು. ಇದೊಂದು ಮಹತ್ವಪೂರ್ಣವಾದ ಘಟನೆಯೇ ಎಂದು ಭಾವಿಸಬಹುದು. **ಅದಾದ ಕೆಲವು ತಿಂಗಳಿನಲ್ಲಿಯೆ ೧೯೫೪ರ ಡಿಸೆಂಬರ್ ಮಾಹೆಯ ೨ನೇ ತಾರೀಖು, ಗಂಗೆಯ ಪೂರ್ವದಿಕ್ಕಿನ ತೀರದಲ್ಲೇ ಮಹಾಮಾತೆಯವರ ಜನ್ಮಶತಮಾನ ಉತ್ಸವದ ಆರಂಭದಲ್ಲೇ ಬಹು ಆಕಾಂಕ್ಷಿತವಾದ ಸ್ವಾಮಿ ವಿವೇಕಾನಂದರ ಕನಸಾಗಿದ್ದ ಶ್ರೀ ಶಾರದಾಮಠದ ಸ್ಥಾಪನೆ ಆಯಿತು.** ಆಗಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದಜಿಯವರು ಹಾಗೂ ಉಪಾಧ್ಯಕ್ಷರಾಗಿದ್ದ ಸ್ವಾಮಿ ವಿಶುದ್ಧಾನಂದಜಿಯವರು ಮತ್ತು ಇನ್ನೂ ಅನೇಕ ಹಿರಿಯ ಸಂನ್ಯಾಸಿಗಳೆಲ್ಲ ನೆರೆದಿದ್ದು ಆ ಮಹತ್ ಕಾರ್ಯವನ್ನು ಉದ್ಘಾಟಿಸಿದರು.


## ಜಾಗತಿಕ ಇತಿಹಾಸದ ಮಹತ್ವದ ಮೈಲುಗಲ್ಲು

ಕೆಲವು ವರ್ಷಗಳು ನೂತನ ಮಠದ ಬ್ರಹ್ಮಚಾರಿಣಿಯರೇ ಬೇಲೂರು ಮಠದಿಂದ ಮಾರ್ಗದರ್ಶನ ಪಡೆದು ಶಾರದಾಮಠದ ಸಂಚಾಲನೆಯನ್ನು ಅತ್ಯಂತ ದಕ್ಷತೆಯಿಂದ ನಡೆಸತೊಡಗಿದರು. ನಂತರ ೧೯೫೯ರ ಜನವರಿಯ ಮೊದಲನೆಯ ದಿನ ಮಹಾಮಾತೆಯವರ ಜನ್ಮದಿನದಲ್ಲಿ ಆಗಲೇ ಬ್ರಹ್ಮಚರ್ಯ ದೀಕ್ಷೆ ಪಡೆದಿದ್ದ ಆ ೮ ಜನ ಬ್ರಹ್ಮಚಾರಿಣಿಯರಿಗೆ ಸಂನ್ಯಾಸ ದೀಕ್ಷೆಯನ್ನು ರಾಮಕೃಷ್ಣ ಮಠಾಧ್ಯಕ್ಷರು ನೀಡಿದರು. ಈ ೪-೫ ವರ್ಷಗಳಿಂದ ಇವರುಗಳನ್ನು ನೋಡಿ ಪರೀಕ್ಷೆ ಮಾಡಿದ್ದರಿಂದ ಆ ವರ್ಷದ ಅಂದರೆ ೧೯೫೯ರ ಆಗಸ್ಟ್ ತಿಂಗಳಿನಲ್ಲಿ ಶಾರದಾ ಮಠದ ಆಡಳಿತವನ್ನು ಆ ಮಠದ ಸಂನ್ಯಾಸಿನಿಯರೇ ಸ್ವತಂತ್ರವಾಗಿ ನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಯಿತು. ಅಲ್ಲಿನ ಸಂನ್ಯಾಸಿನಿಯರೇ ಆಡಳಿತ ಮಂಡಲಿಯ ಸದಸ್ಯೆಯರಾಗಿ ನೇಮಕಗೊಂಡು ಶಾರದಾಮಠವನ್ನು ಒಂದು ಸ್ವತಂತ್ರ ಸಂಸ್ಥೆ ಎಂದು ಘೋಷಿಸಲಾಯಿತು.

ಜಗತ್ತಿನ ಇತಿಹಾಸದಲ್ಲೇ ಇದು ಒಂದು ಅಪೂರ್ವವಾದ ಮೈಲುಗಲ್ಲು. ಏಕೆಂದರೆ ಇಂದಿನವರೆಗೂ ಹೀಗೆ ಸಂಪೂರ್ಣವಾಗಿ ಸ್ವತಂತ್ರವಾದ ಸ್ತ್ರೀಮಠ ಇಲ್ಲವೇ ಇರಲಿಲ್ಲ. ಭಗವಾನ್ ಬುದ್ಧದೇವನು ಸ್ತ್ರೀಯರಿಗೆ ಮಠದಲ್ಲಿದ್ದು ಆಧ್ಯಾತ್ಮಿಕ ಜೀವನವನ್ನು ನಡೆಸುವ ಅಧಿಕಾರ ಕೊಟ್ಟಿದ್ದುದು ನಿಜ. ಕ್ರಿಶ್ಚಿಯನ್ ಧರ್ಮದಲ್ಲೂ ಸ್ತ್ರೀಯರ ಮಠಗಳಿವೆ. ಆದರೆ ಅದರ ಪ್ರಮುಖ ಆಡಳಿತ ಸೂತ್ರಗಳು ಪುರುಷರ ಅಧೀನದಲ್ಲಿಯೇ ಇವೆ. ಯಾವ ಪುರುಷರ ಆಡಳಿತದ ಕೈಕೆಳಗೂ ಇರದೆ, ಮಠದಲ್ಲಿನ ಎಲ್ಲಾ ವಿಷಯಗಳನ್ನೂ ಸ್ತ್ರೀಯರೇ ನಡೆಸಿಕೊಳ್ಳುವಂತಹ ಸಂಪೂರ್ಣ ಸ್ವಾಧೀನವಾದ, ಸ್ವಾಯತ್ತೆಯುಳ್ಳ ಸ್ತ್ರೀಮಠ ವಿಶ್ವದ ಇತಿಹಾಸದಲ್ಲಿ ಇದೇ ಮೊಟ್ಟಮೊದಲು. ಇದು ಸ್ವಾಮಿ ವಿವೇಕಾನಂದರ ಕೃಪೆಯಿಂದಲೇ ಸಾಧ್ಯವಾಯಿತು.

ಸ್ವಾಮಿ ವಿವೇಕಾನಂದರಿಗೆ ಹೆಣ್ಣುಮಕ್ಕಳ ಸಾಮರ್ಥ್ಯದ ಮೇಲೆ

ಅಪಾರವಾದ ವಿಶ್ವಾಸ ಮತ್ತು ನಂಬಿಕೆಯಿತ್ತು. ಭಗಿನಿ ನಿವೇದಿತಾ ತಮ್ಮ 'ನಾ ಕಂಡಂತೆ ನನ್ನ ಗುರುದೇವ' ಎಂಬ ಮಹತ್ ಕೃತಿಯಲ್ಲಿ ಸ್ವಾಮೀಜಿಯವರಿಗೆ ಹೆಣ್ಣು ಮಕ್ಕಳ ಮೇಲಿದ್ದ ವಿಶ್ವಾಸದ ಕುರಿತು ಈ ರೀತಿ ಹೇಳುತ್ತಾರೆ: '೫೦೦ ಪುರುಷರಿಂದ ಭಾರತದ **ಏಳಿಗೆಯಾಗಬೇಕಾದರೆ ಸುಮಾರು ೫೦ ವರ್ಷಗಳ ಸಮಯ ಬೇಕಾದರೆ ಅದೇ ಕೆಲಸವನ್ನು ೫೦೦ ಸ್ತ್ರೀಯರಿಂದ ಕೇವಲ ೫ ವಾರದಲ್ಲೇ ಸಾಧಿಸ ಬಹುದು.'** ಎಂತಹ ಭಾವನೆ ಮತ್ತು ಭರವಸೆ ಅವರಿಗಿತ್ತು ಹೆಣ್ಣುಮಕ್ಕಳ ವಿಷಯದಲ್ಲಿ! ಭಾರತದ ಇತಿಹಾಸದಲ್ಲೇ ಸ್ತ್ರೀಶಕ್ತಿಯ ಬಗ್ಗೆ ಅಷ್ಟೊಂದು ಶ್ರದ್ಧೆ ಮತ್ತು ಭರವಸೆ ಸರ್ವಪ್ರಥಮವಾಗಿ ವ್ಯಕ್ತವಾದದ್ದು ಸ್ವಾಮಿ ವಿವೇಕಾನಂದರಲ್ಲಿ. ಸ್ತ್ರೀಶಕ್ತಿಯ ವಿಷಯವಾಗಿ ಅಷ್ಟೊಂದು ಶ್ರದ್ಧೆಯಿಂದ ಮಾತನಾಡಿದವರಲ್ಲಿ ಸ್ವಾಮಿ ವಿವೇಕಾನಂದರೇ ಮೊಟ್ಟ ಮೊದಲಿಗರು.



**ದಕ್ಷಿಣೇಶ್ವರದಲ್ಲಿರುವ ಶಾರದಾಮಠದ ಪ್ರಧಾನ ಕೇಂದ್ರ**

### ರಾಮಕೃಷ್ಣ-ಶಾರದಾ ಮಿಷನ್

೧೯೬೦ನೆ ಇಸವಿಯ ಮೇ ೧೩ರಂದು ಶಾರದಾಮಠದ ಸೇವಾಕಾರ್ಯಗಳನ್ನು ನಡೆಸಲೋಸುಗ ರಾಮಕೃಷ್ಣ-ಶಾರದಾ ಮಿಷನ್ ಸ್ಥಾಪಿತಗೊಂಡು ಅದರ ನೋಂದಾಣಿಕೆಯಾಯಿತು. ಶಾರದಾಮಠ ಮತ್ತು ರಾಮಕೃಷ್ಣ-ಶಾರದಾ ಮಿಷನ್ ಎಂಬ ಸಂಸ್ಥೆಗಳು — ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನಂತೆ ಒಂದೇ ಸಂಸ್ಥೆಯ ಎರಡು ವಿಭಾಗಗಳು ಮಾತ್ರವೇ. ಒಂದೇ ಆಡಳಿತ ಸಮಿತಿ ಎರಡು ಸಂಸ್ಥೆಗಳ ಕಾರ್ಯಚಟುವಟಿಕೆಗಳ ನಿರ್ವಹಣೆಯನ್ನು ಮಾಡುತ್ತದೆ. ಶಾರದಾ ಮಠ ಮತ್ತು ಅದರ ಶಾಖಾ ಕೇಂದ್ರಗಳಲ್ಲಿ ಮುಖ್ಯವಾಗಿ ಪೂಜೆ, ಶಾಸ್ತ್ರಾಧ್ಯಯನ, ಪಾಠಪ್ರವಚನ ಇತ್ಯಾದಿಗಳು ಬ್ರಹ್ಮಚಾರಿಣಿ ಮತ್ತು ಸಂನ್ಯಾಸಿನಿಯರ ಮುಖ್ಯ ಚಟುವಟಿಕೆಗಳು. ಹಾಗೆಯೆ ಮಿಷನ್‌ನ ಪ್ರಧಾನ ಮತ್ತು ಶಾಖಾಕೇಂದ್ರಗಳಲ್ಲಿ ಅವರ ಸಾಧನೆಯು ಸಮಾಜಸೇವಾಕಾರ್ಯಗಳಿಗೆ ಮೀಸಲಾಗಿರುತ್ತದೆ.

ಶಾರದಾಮಠದ ಪ್ರಧಾನ ಕೇಂದ್ರ ಇರುವುದು ಕಲ್ಕತ್ತೆಯ ದಕ್ಷಿಣೇಶ್ವರದ ಗಂಗಾತೀರದಲ್ಲಿ—(ಶ್ರೀ ಶಾರದಾ ಮಠ, ದಕ್ಷಿಣೇಶ್ವರ, ಕಲ್ಕತ್ತ, ೭೦೦ ೦೭೬). ಇದು ಶ್ರೀರಾಮಕೃಷ್ಣರ ಲೀಲಾಕ್ಷೇತ್ರವಾದ ದಕ್ಷಿಣೇಶ್ವರದ ಭವತಾರಿಣಿಯ ದೇವಾಲಯದ ಅತಿ ಸಮೀಪದಲ್ಲಿಯೇ ಇದೆ. ಮಠದಲ್ಲಿನ ಸುಂದರವಾದ ದೇವಾಲಯದ ಕಲ್ಲಿನ ಕಟ್ಟಡ ಬೇಲೂರು ಮಠದ ದೇವಾಲಯದ ನಮೂನೆಯಂತೆಯೇ ಇದ್ದು ೧೯೮೮ರಲ್ಲಿ ಇದರ ಉದ್ಘಾಟನೆಯಾಯಿತು. ಈ ಮಠದ ಶಾಖೆಗಳು ಭರತವರ್ಷದ ಎಲ್ಲಾ ಮುಖ್ಯ ಸ್ಥಳಗಳಲ್ಲಿಯೂ ಇವೆ. ಇವುಗಳ ಒಟ್ಟು ಸಂಖ್ಯೆ ೧೦. ಭಾರತದ ಹೊರಗೆ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಶಾರದಾಮಠದ ಶಾಖೆಯೊಂದಿದೆ. ಈ ಮಠದ ಸಂನ್ಯಾಸಿನಿಯರು ಭಾರತ ಮತ್ತು ವಿದೇಶಗಳಲ್ಲಿ ರಾಮಕೃಷ್ಣ ಮತ್ತು ವೇದಾಂತ ಪ್ರಚಾರ ಕಾರ್ಯಗಳಲ್ಲಿ ಹಾಗೂ ಜನಹಿತಕರವಾದ ಕಲ್ಯಾಣ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು. ಇದಲ್ಲದೆ ರಾಮಕೃಷ್ಣ-ಶಾರದಾ ಮಿಷನ್ನಿನ ೧೧ ಶಾಖೆಗಳು ಕಾಲೇಜು ಮಟ್ಟದ ವಿದ್ಯಾಕೇಂದ್ರ, ಚಿಕಿತ್ಸಾ ಕೇಂದ್ರ ಹಾಗೂ ಜನಕಲ್ಯಾಣ ಕೇಂದ್ರಗಳ ಮೂಲಕ ಸಮಾಜಸೇವಾ ಕಾರ್ಯಗಳಲ್ಲಿ ತೊಡಗಿವೆ. ಭಾರತದ ಹೊರಗೆ ಯೂರೋಪ್, ಉತ್ತರ ಅಮೆರಿಕ, ದಕ್ಷಿಣ ಅಮೆರಿಕಾದಲ್ಲೂ ಹೋಗಿ ವೇದಾಂತದ ಮತ್ತು ಶ್ರೀರಾಮಕೃಷ್ಣ-ಮಹಾಮಾತೆಯವರ ಜೀವನ ಮತ್ತು ವಾಣಿಯ ಪ್ರಚಾರ ನಡೆಸುತ್ತಿರುವರು. ಆಸ್ಟ್ರೇಲಿಯಾದ ಸಿಡ್ನಿಯಲ್ಲಿರುವ ಸಂನ್ಯಾಸಿನಿಯರು ಅಲ್ಲಿನ ವಿಭಿನ್ನ ಪ್ರದೇಶಗಳಲ್ಲೇ ಅಲ್ಲದೆ ಸಿಂಗಾಪುರ, ಮಲೇಷ್ಯಾ ಮುಂತಾದ ದೇಶಗಳಲ್ಲೂ ಧರ್ಮಪ್ರಚಾರದ ಕಾರ್ಯವನ್ನು ಅತ್ಯಂತ ಸಫಲವಾಗಿ ನಡೆಸುತ್ತಿರುವರು.

### ಸಂಸ್ಕೃತಿ ಸಭ್ಯತೆಗಳ ಅಳಿವು ಉಳಿವಿನ ಕೇಂದ್ರವಾಗಿ ನಾರೀಕುಲ

ಮಹಿಳೆಯರು ಉನ್ನತಿಗೇರಿದರೆ ಮಕ್ಕಳೂ ಉತ್ತಮರಾಗುತ್ತಾರೆ, ತಮ್ಮ ಸತ್ಕಾರ್ಯಗಳ ಮೂಲಕ ನಾಡಿಗೆ ಕೀರ್ತಿಯನ್ನು ತರುತ್ತಾರೆ. ಆಗ ಮಾತ್ರವೇ ಸಂಸ್ಕೃತಿ, ಜ್ಞಾನ, ಶಾಂತಿ ಮತ್ತು ನಿಷ್ಠೆ ಜಾಗೃತಗೊಳ್ಳುತ್ತವೆ—ಎಂಬುದನ್ನು ಸ್ವಾಮಿ ವಿವೇಕಾನಂದರು ಒತ್ತಿ ಹೇಳುತ್ತಿದ್ದರು. ಹೆಣ್ಣುಮಕ್ಕಳ ಅಂತಸ್ಸತ್ವದ ಮಹಿಮೆಯನ್ನು ಮನಮುಟ್ಟುವ ಅವರ ಈ ಮಾತುಗಳಲ್ಲಿ ಕಾಣಬಹುದಾಗಿದೆ: 'ಮಹಿಳೆಯರಲ್ಲಿ ಒಬ್ಬರು ಬ್ರಹ್ಮಜ್ಞಾನಿಗಳಾದರೂ ಅವರ ವ್ಯಕ್ತಿತ್ವದ ಪ್ರಭೆಯಿಂದ ಅನೇಕರು ಸ್ಫೂರ್ತಿಯನ್ನು ಪಡೆದು ಸತ್ಯಾನ್ವೇಷಣೆಯಲ್ಲಿ ತೊಡಗುತ್ತಾರೆ. ಆಗಲೇ ದೇಶ ಮತ್ತು ಸಮಾಜದ ಅಭ್ಯುದಯ ಸಾಧ್ಯವಾಗುವುದು. ಸ್ತ್ರೀಯರ ಉನ್ನತಿಯನ್ನೇ ದೇಶ, ಸಂಸ್ಕೃತಿ, ಸಭ್ಯತೆಗಳು ಅವಲಂಬಿಸಿರುವುವು.

ನಾರೀಕುಲದ ಮೇಲೆ ಸ್ವಾಮಿ ವಿವೇಕಾನಂದರು ಇಟ್ಟುಕೊಂಡಿದ್ದ ಈ ಭರವಸೆ, ಈ ಆಕಾಂಕ್ಷೆಯನ್ನು ಪರಿಪೂರ್ಣಗೊಳಿಸುವ ಶಕ್ತಿಯನ್ನು ಅವರು ನಮಗೆ ನೀಡಲಿ, ಆ ಶಕ್ತಿಯಿಂದ ನಮ್ಮ ಬದುಕು ಸಾರ್ಥಕವಾಗಲಿ ಎಂದು ನಾವು ಪ್ರಾರ್ಥಿಸೋಣ.